ದಿನಾಂಕಃ **04.08.2026.**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯ್ತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-**

1. ನನಗೆ ಓದಲು ಬರೆಯಲು ಬರುತ್ತದೆ. ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿದ್ದೇನೆ. ನನಗೆ ಇಂಗ್ಲೀಷ್ ನಲ್ಲಿ ಬರೆದಿರುವುದು ಅರ್ಥ ಆಗುತ್ತದೆ. ನಾನು ವ್ಯವಸಾಯ ಮಾಡುತ್ತೇನೆ. ನನಗೆ 3 ಎಕರೆ ಜಮೀನಿದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ.

2. ಆರೋಪಿ ನಿನಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ಆರೋಪಿ ನನ್ನ ಅಣ್ಣನ ಮಗ ಎಂದು ನುಡಿಯುತ್ತಾರೆ. ಅವರದು ಸೊರಬ. ನಿಮ್ಮ ದೂರಿನಲ್ಲಿ ನೀವು ದುಬೈ ಗೆ ಹೋಗಿದ್ದ ಬಗ್ಗೆ ಬರೆಸಿದ್ದೀರಾ ಎಂದರೆ ಸಾಕ್ಷಿ ನಾನು ದುಬೈಗೆ ಹೋಗಿಲ್ಲ ಎಂದು ನುಡಿಯುತ್ತಾರೆ. ಆರೋಪಿ 2 ನೇ ತಾರೀಖು ಬಂದು ನನ್ನ ಬಳಿ ಹಣ ಕೇಳಿದ್ದು, ದಿಃ 04.01.2023 ರಂದು ನಾನು ಆರೋಪಿಗೆ ಹಣ ಕೊಟ್ಟಿರುತ್ತೇನೆ. ಸದರಿ ವಿಚಾರವನ್ನು ನಾನು ದೂರಿನಲ್ಲಿ ತಿಳಿಸಿಲ್ಲ. ನನ್ನ ದೂರಿನಲ್ಲಿ 4 ನೇ ತಾರೀಖೇ ಬಂದು ಹಣ ಕೇಳಿದ್ದು, ನಾನು 4 ನೇ ತಾರೀಖೆ ಹಣ ಕೊಟ್ಟಿದ್ದೇನೆ ಎಂದು ಬರೆದಿದೆ ಎಂದರೆ ಸಾಕ್ಷಿ ಇಲ್ಲ, 2 ದಿನ ಮೊದಲು ಬಂದು ಕೇಳಿದರು ಎಂದು ನುಡಿಯುತ್ತಾರೆ. ಆ ರೀತಿ 2 ದಿನ ಮೊದಲು ಹಣ ಕೇಳಿದ ಬಗ್ಗೆ ದೂರಿನಲ್ಲಿ ಬರೆಸಿಲ್ಲ.

3. ನಾನು ಆರೋಪಿಗೆ 6,75,000/- ಹಣ ಕೊಟ್ಟಿರುತ್ತೇನೆ. ಸದರಿ ಹಣ ನನಗೆ ಶುಂಠಿಯಿಂದ ಬಂದಿರುತ್ತದೆ. ನಾನು ಆಗ ಯಾರಿಗೆ ಶುಂಠಿ ಕೊಟ್ಟಿದ್ದೇನೆ ಎಂದು ಹೇಳುತ್ತೇನೆ. ಶುಂಠಿ ಖರೀದಿ ಮಾಡುವವರು ನನ್ನದು ಎಷ್ಟಾಯಿತು ಎಂದು ಪಟ್ಟಿ ಮಾಡುತ್ತಾರೆ ಎಂದರೆ

ಸರಿ. ನಾನು ಸದರಿ ಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಆರೋಪಿಗೆ ಸೊರಬ ವಿಳಾಸಕ್ಕೆ ನೋಟೀಸ್ ಕಳುಹಿಸಿದ್ದೇನೆ. ಆ ರೀತಿ ನಾನು ಹೊಸಪೇಟೆ ಹಕ್ಕಲು ವಿಳಾಸಕ್ಕೆ ಕಳುಹಿಸಿರುತ್ತೇನೆ. ನನ್ನ ದೂರಿನಲ್ಲಿ ಆರೋಪಿ ವಿಳಾಸವನ್ನು ಗ್ಯಾಸ್ ಆಫೀಸ್ ಹಿಂಭಾಗ, ಮಾಸೂರು ರಸ್ತೆ, ಸೊರಬ ಎಂದು ತಿಳಿಸಿದ್ದೇನೆ ಎಂದರೆ ಸಾಕ್ಷಿ ಸದರಿ ವಿಳಾಸಕ್ಕೆ ನಂತರ ಬದಲಾವಣೆ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನೋಟೀಸ್ ಆರೋಪಿ ತಲುಪಿದೆ. ಆ ರೀತಿ ಸದರಿ ನೋಟೀಸ್ ಆರೋಪಿಗೆ ತಲುಪಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೇನೆ.

4. ನಾನು ಅವರಿಗೆ ಕೋರಿಯರ್ ಸಹ ಮಾಡಿದ್ದೇನೆ ಎಂದರೆ ಸರಿ. ಅದೂ ಸಹ ಅವರಿಗೆ ಮುಟ್ಟಿದೆ, ಆ ಬಗ್ಗೆ ನಾನು ದಾಖಲೆ ಹಾಜರುಪಡಿಸಿದ್ದೇನೆ. ಆರೋಪಿಗೆ ಯಾವುದೇ ನೋಟೀಸ್ ಮುಟ್ಟಿಲ್ಲ ಎಂದರೆ ಸರಿಯಲ್ಲ. ನಾನು ದಿಃ 12.05.2023 ಕ್ಕೆ ಕೋರಿಯರ್ ಮಾಡಿದ್ದೇನೆ ಎಂದರೆ ಸರಿ. ಅದೇ ರೀತಿ ಆರೋಪಿಗೆ ದಿಃ 11.05.2023 ಕ್ಕೆ ರಿಜಿಸ್ಟರ್ ಪೋಸ್ಟ್ ಮಾಡಿದ್ದೇನೆ ಎಂದರೆ ಸರಿ. ಸದರಿ ಅಂಚೆ ದಿಃ 19.05.2023 ರಕ್ಕೆ ವಾಪಸ್ಸು ಬಂದಿದೆ ಎಂದರೆ ಸಾಕ್ಷಿ ವಾಪಸ್ ಬಂದಿತ್ತು ಎಂದು ನುಡಿಯುತ್ತಾರೆ.

5. ನಾನು ದೂರನ್ನು ದಿಃ 31.05.2023 ಕ್ಕೆ ಹಾಕಿದ್ದೇನೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ಆರೋಪಿಗೆ 15 ದಿನಗಳ ಸಮಯ ಕೊಡದೇ ಮೊದಲೇ ಕೇಸು ದಾಖಲಿಸಿದ್ದೇನೆ ಎಂದರೆ ಸಾಕ್ಷಿ ನಾನು ಸಮಯ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನನ್ನ ನೋಟೀಸಿನಲ್ಲಿ ಆರೋಪಿಗೆ 7 ದಿನದಲ್ಲಿ ಹಣ ಕೊಡಬೇಕು ಎಂದು ತಿಳಿಸಿದ್ದೇನೆ ಎಂದರೆ ಸರಿ.

ಆರೋಪಿ ಶಿಕಾರಿಪುರದಲ್ಲಿ ಮದುವೆ ಆಗಿರುವುದು ಎಂದರೆ ಸರಿ. ಅವರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.**

**ಓ ಹೇ ಕೇ ಸ ಇದೆ.**

**ಹಿರಿಯ ವ್ಯವಹಾರ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಶಿಕಾರಿಪುರ.**